# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:02–05–2026 ರಂದು ಶನಿವಾರ "ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 402ನೇ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಹೇಮಂತ್ ಎನ್. ಐ.ಎ.ಎಸ್. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಚಂದ್ರಶೇಖರ್ ಎಸ್., ಡೀನರು, ಕಲಾ ನಿಕಾಯ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಡಾ. ಚಿದಾನಂದ ಎನ್.ಕೆ. ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಎಂ. ವೆಂಕಟೇಶ್. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಪ್ರತಿಭಾ ಕೆ.ಆರ್. ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 12. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 13. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 14. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 15. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 16. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ. ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |
| 5. | ಡಾ. ಕೇಶವ, ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |

**ಪ್ರಸ್ತಾವನೆ:**

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರನ್ನು ಮಾನ್ಯ ಕುಲಪತಿಗಳು ಆತ್ಮೀಯವಾಗಿ ಸ್ವಾಗತಿಸಿದರು. ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ವಿಶ್ವವಿದ್ಯಾಲಯದ ಕುಲಸಚಿವ (ಆಡಳಿತ) ಹುದ್ದೆಯ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಹೇಮಂತ್.ಎನ್.ಐ.ಎ.ಎಸ್. ಇವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಅದೇ ರೀತಿ ದಿನಾಂಕ;31–03–2026 ರಿಂದ 05–04–2026 ರವರೆಗೆ ಪ್ರಭಾರ ಕುಲಸಚಿವರಾಗಿ ಕಾರ್ಯನಿರ್ವಹಿಸಿದ ಪ್ರೊ.ಆರ್.ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) ಇವರನ್ನು ಅಭಿನಂದಿಸಲಾಯಿತು. ಹಾಗೂ ದಿನಾಂಕ:04–03–2024 ರಿಂದ ದಿನಾಂಕ: 31–03–2026 ರವರೆಗೆ ಕುಲಸಚಿವ (ಆ) ರಾಗಿ ಕಾರ್ಯನಿರ್ವಹಿಸಿ ಸರ್ಕಾರದ ಆದೇಶದನ್ವಯ ವಿಶ್ವವಿದ್ಯಾಲಯದಿಂದ ಬಿಡುಗಡೆ ಹೊಂದಿದ ಶ್ರೀ ಎ.ಎಲ್.ಮಂಜುನಾಥ್,ಕೆ.ಎ.ಎಸ್.(ಸೂಪರ್ ಟೈಮ್ ಸ್ಕೇಲ್) ಇವರನ್ನು ಅವರ ಅನುಪಸ್ಥಿತಿಯಲ್ಲಿ ಅಭಿನಂದನೆಯನ್ನು ಸಲ್ಲಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಸಚಿವರು ಮಾತನಾಡುತ್ತಾ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಇಂದಿನ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆದಿರುವುದಾಗಿ ವಿವರಿಸುತ್ತಾ, ಇಂದಿನ ಸಭೆಯಲ್ಲಿ ಪ್ರಮುಖವಾಗಿ ಈ ಕೆಳಕಂಡಂತೆ ಮೂರು ಕಾರ್ಯಸೂಚಿ ಇರುವುದನ್ನು ಸಭೆಗೆ ತಿಳಿಸಿದರು.

1) **ವಿದ್ಯಾರ್ಥಿ ಸಂಘಟನೆಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಮನವಿಗಳ ಕುರಿತು ಚರ್ಚಿಸಿ, ಸರ್ಕಾರಕ್ಕೆ ವರದಿಯನ್ನು ನೀಡುವ ಕುರಿತು.**

2) **ದಿನಾಂಕ:29-04-2026 ರಂದು ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿ ನಡೆದಿರುವ ಅಹಿತಕರ ಘಟನೆಗಳ ಬಗ್ಗೆ ಸರ್ಕಾರಕ್ಕೆ ವರದಿಯನ್ನು ನೀಡುವ ಕುರಿತು.**

3) **ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರು ಸುಳ್ಳು ಪಿಹೆಚ್.ಡಿ. ಮತ್ತು ಮಾನ್ಯತೆ ಪಡೆಯದ ಎಂ.ಟೆಕ್. ಪದವಿ ಪ್ರಮಾಣ ಪತ್ರ ನೀಡಿ ನೇಮಕಾತಿ ಹೊಂದಿರುವುದು ಸಾಬೀತಾಗಿರುವುದರಿಂದ ಇವರನ್ನು ಸೇವೆಯಿಂದ ವಜಾಗೊಳಿಸಲು ಘನತೆವೆತ್ತ ರಾಜ್ಯಪಾಲರ ಅನುಮೋದನೆಯನ್ವಯ ಸರ್ಕಾರ ನೀಡಿರುವ ನಿರ್ದೇಶನವನ್ನು ಅನುಷ್ಠಾನಗೊಳಿಸುವ ಕುರಿತು.**

ಮೇಲ್ಕಂಡ ಮೂರು ಕಾರ್ಯಸೂಚಿಗಳ ಕುರಿತು ಉತ್ತಮ ಚರ್ಚೆ ನಡೆಸಿ ನಿರ್ಣಯ ಕೈಗೊಳ್ಳೋಣ ಎಂದರು. ನಂತರ ಕಾರ್ಯಸೂಚಿಯ ಪ್ರಕಾರ ವಿಷಯವನ್ನು ಚರ್ಚೆಗೆ ಕೈಗೆತ್ತಿಗೊಳ್ಳಲಾಯಿತು.

**2026-ಸಿಂ-4.01:** **ವಿದ್ಯಾರ್ಥಿ ಸಂಘಟನೆಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಮನವಿಗಳ ಕುರಿತು ಚರ್ಚಿಸಿ, ಸರ್ಕಾರಕ್ಕೆ ವರದಿಯನ್ನು ನೀಡುವ ಕುರಿತು.**

ಚರ್ಚೆ: ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯಕ್ಕೆ ಕೆಲವು ಬೇಡಿಕೆಗಳ ಬಗ್ಗೆ N.S.U.I. ಮತ್ತು A.B.V.P. ಎರಡು ವಿದ್ಯಾರ್ಥಿ ಸಂಘಟನೆಗಳು ಮನವಿಯನ್ನು ಸಲ್ಲಿಸಿದ್ದು, ಅದರಲ್ಲಿ ಒಂದೊಂದಾಗಿ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಬಹುದೆಂದರು. ಅದರಲ್ಲಿ ಮೊದಲು ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ (ಶಿವಮೊಗ್ಗ) (NSUI ) ಇವರು ನೀಡಿರುವ ಮನವಿಯಲ್ಲಿ

1. **ಕಳೆದ 5 ತಿಂಗಳ ಹಿಂದೆ ನಡೆದ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಬೇಕು. ಪದವಿ ಪ್ರಮಾಣ ಪತ್ರ, ಅಂಕಪಟ್ಟಿ, ಜೆನ್ಯೂಯಿನ್ ಸರ್ಟಿಫಿಕೇಟ್ ವಿತರಣೆ ಮಾಡಬೇಕು.**

ಕುಲಸಚಿವರು ಮಾತನಾಡುತ್ತಾ, ಈ ವಿಷಯದ ಕುರಿತು ಕುಲಸಚಿವರು (ಮೌಲ್ಯಮಾಪನ) ರವರು ಸದರಿ ವಿದ್ಯಾರ್ಥಿ ಬೇಡಿಕೆಗಳ ಬಗ್ಗೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ಬಗ್ಗೆ ಸಭೆಗೆ ವಿವರಿಸಲು ಕೋರಿದರು.

ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡುತ್ತಾ, ಹಿಂದಿನ ಪರೀಕ್ಷೆಯಲ್ಲಿ ಕೆಲವು ಲೋಪದೋಷಗಳು ಇತ್ತು ಇದರಿಂದ 20 ದಿನ ವಿಳಂಬವಾಗಿದೆ. ಈಗ ಬಿ.ಇಡಿ ಮತ್ತು ಇತರೆ ಸ್ನಾತಕ ಪದವಿಯ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ದಿನಾಂಕ:27-04-2026 ರಂದು ಪ್ರಕಟಿಸಲಾಗಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಮುಂದುವರೆದು ಮಾತನಾಡುತ್ತಾ, ಇಂಗ್ಲೀಷ್ ವಿಷಯದ ಮೌಲ್ಯಮಾಪನವು ವಿಳಂಬ ಆಗಿದ್ದು, ಅದಕ್ಕೆ ಸಂಬಂಧಪಟ್ಟವರಿಗೆ ನೋಟೀಸ್ ಜಾರಿ ಮಾಡಿದ ಮೇಲೆ ಮೌಲ್ಯಮಾಪನ ಪ್ರಾರಂಭ ಮಾಡಿ 15 ದಿನ ವಿಳಂಬ ಆಗಿದೆ. ಈಗ ಎಲ್ಲಾ ಸರಿ ಹೋಗಿರುತ್ತದೆ ಎಂದರು.

ಕುಲಸಚಿವರು ಮಾತನಾಡುತ್ತಾ, ಪರೀಕ್ಷಾ ಮೌಲ್ಯಮಾಪಕರಿಗೆ ಸಂಭಾವನೆ ನೀಡಿಲ್ಲದೇ ಇರುವುದಕ್ಕೆ ಮೌಲ್ಯಮಾಪನ ವಿಳಂಬ ಮಾಡುವುದು ಸರಿಯಲ್ಲ. ಈಗಾಗಲೇ ಸಂಭಾವನೆಯನ್ನು ಪಾವತಿಸಲಾಗಿದೆ. ಮುಂದಿನ ದಿನಗಳಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಪರಿಗಣಿಸಿ ಸಂಭಾವನೆಯನ್ನು ಪಾವತಿಸಲು ಕ್ರಮವಹಿಸಲಾಗುವುದು ಎಂದರು.

ಸದಸ್ಯರಾದ ಶ್ರೀ.ಕೆ.ಪಿ. ಶ್ರೀಪಾಲ್ ರವರು ಮಾತನಾಡುತ್ತಾ, Digital Evaluation ಮತ್ತು Centralized Evaluation ಬಗ್ಗೆ ಅಸಮಾಧಾನ ಇತ್ತು, ಕೋ–ಆರ್ಡಿನೇಟರ್‌ರೊಂದಿಗೆ ಹೊಂದಾಣಿಕೆ ಇಲ್ಲದೇ ಇದ್ದುದರಿಂದ ಈ ರೀತಿ ವಿಳಂಬವಾಗುತ್ತಿದೆ ಎಂಬ ಮಾಹಿತಿ ಇದೆ ಎಂದರು.

ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡುತ್ತಾ, ಆ ರೀತಿ ಏನೂ ಇಲ್ಲ ಪರೀಕ್ಷಾ ಮಂಡಳಿಯ ಅಧ್ಯಕ್ಷರು ತಮ್ಮನ್ನು ಭೇಟಿ ಮಾಡಿ ಎಷ್ಟು ದಿನ ಮೌಲ್ಯಮಾಪನ ಮಾಡುತ್ತೇವೋ ಅಷ್ಟು ದಿನಗಳಿಗೆ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವಂತೆ ಕೋರಿದರು. ಇದರ ಕುರಿತು ಪ್ರಾದೇಶಿಕ ಜಂಟಿ ನಿರ್ದೇಶಕರು ನಿಯಮಗಳಲ್ಲಿ ಅವಕಾಶ ಇಲ್ಲ ಎಂದು ತಿಳಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ.ಕೆ.ಪಿ. ಶ್ರೀಪಾಲ್ ರವರು ಮಾತನಾಡುತ್ತಾ, ಇನ್ನು ಮುಂದೆ ಈ ರೀತಿ ಆಗಬಾರದು ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಪಾಠ ಪ್ರವಚನ ನಡೆಯುವ ಸಮಯದಲ್ಲಿ ತರಗತಿಯನ್ನು ಬಿಟ್ಟು, ಮೌಲ್ಯಮಾಪನಕ್ಕೆ ಅವಕಾಶ ನೀಡಲಾಗುತ್ತಿದೆ ಎಂಬ ಮಾಹಿತಿ ಇದೆ, ಆ ರೀತಿ ಆಗಬಾರದು ಎಂದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ರವರು ಮಾತನಾಡುತ್ತಾ, ಅದೊಂದೇ ವಿಷಯದ ಫಲಿತಾಂಶದಲ್ಲಿ ವಿಳಂಬವಾಯಿತಾ ಎಂದರು. ಇದಕ್ಕೆ ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡಿ ಇಂಗ್ಲೀಷ್ ವಿಷಯದಲ್ಲಿ ಮಾತ್ರ ವಿಳಂಬವಾಗಿರುವುದು ಎಂದರು.

ಕುಲಸಚಿವರು ಮಾತನಾಡಿ ಆ ರೀತಿಯ ಸಮಸ್ಯೆ ಏನಾದರೂ ಇದ್ದರೆ ಅದನ್ನು ಲಿಖಿತವಾಗಿ ನೀಡುವಂತೆ ತಿಳಿಸಿದರು. ವಿದ್ಯಾರ್ಥಿ ಸಂಘಟನೆಯ ಮನವಿ / ಕೋರಿಕೆ ಆಲಿಸಬೇಕು ನಿರ್ಧಿಷ್ಟ ಸಮಸ್ಯೆ ಇದ್ದರೆ ತಿಳಿಸಬೇಕು ಅದನ್ನು ಬಗೆಹರಿಸಲು ಪ್ರಯತ್ನ ಮಾಡೋಣ ಎಂದರು. ಬೇರೆ ಎಲ್ಲಾ ವಿಷಯಗಳ ಮೌಲ್ಯಮಾಪನ ನಡೆದು ಕೇವಲ ಇಂಗ್ಲೀಷ್ ವಿಷಯದ ಮೌಲ್ಯಮಾಪನ ಮಾತ್ರ ಯಾಕೆ ಈ ರೀತಿ ವಿಳಂಬಮಾಡಲಾಗುತ್ತಿದೆ. ತಂತ್ರಾಂಶದಲ್ಲಿ ಏನಾದರೂ ಸಮಸ್ಯೆ ಇದ್ದರೆ ಅದನ್ನು ಪರಿಶೀಲಿಸಿ ಸರಿಪಡಿಸಲು ಕ್ರಮವಹಿಸಲಾಗುವುದು ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು ಎಂದರು. ಇದರಿಂದ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸ ಮತ್ತು ಉದ್ಯೋಗದ ದೃಷ್ಟಿಯಿಂದಲೂ ತೊಂದರೆಯಾಗುತ್ತದೆ ಎಂದರು.

ಕುಲಪತಿಯವರು ಮಾತನಾಡುತ್ತಾ, ಗೊಂದಲ ಏನಾದರೂ ಇದ್ದರೆ ಕಾಲೇಜುಗಳ ಪ್ರಾಂಶುಪಾಲರೊಂದಿಗೆ ಚರ್ಚಿಸಿ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಕ್ರಮಕೈಗೊಳ್ಳಬೇಕು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಸಚಿವರು ಮಾತನಾಡಿ ನಿಗದಿತ ಅವಧಿಯಲ್ಲಿ ಆಗದೇ ಇದ್ದರೆ ಅದನ್ನು ತಿಳಿಸಬೇಕು ಎಂದರು.

ಸದಸ್ಯರಾದ ಶ್ರೀ.ಕೆ.ಪಿ. ಶ್ರೀಪಾಲ್ ರವರು ಮಾತನಾಡುತ್ತಾ, Communication gap ಆಗಿರುವುದು ಮೇಲ್ನೋಟಕ್ಕೆ ತೋರುತ್ತಿದೆ ಎಂದರು. ಮುಂದುವರೆದು ವಿದ್ಯಾರ್ಥಿಗಳ ಸಮಸ್ಯೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವು ಕೈಗೊಳ್ಳಬಹುದಾದ ಕೆಳಕಂಡ 06 ಸಲಹೆಗಳನ್ನು ಸೂಚಿಸಲು ಬಯಸುವುದಾಗಿ ತಿಳಿಸಿ, ಲಿಖಿತವಾಗಿ ಕುಲಸಚಿವರ ಗಮನಕ್ಕೆ ತಂದು, ಅದನ್ನು ಅಳವಡಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿ, ಶೀಘ್ರವಾಗಿ ಅಳವಡಿಸಲು ವಿನಂತಿಸಿದರು.

1. ಸಿಂಗಲ್ ವಿಂಡೋ ಸಿಸ್ಟಮ್:

   ವಿದ್ಯಾರ್ಥಿಗಳು ಎಲ್ಲಾ ರೀತಿಯ ಸಮಸ್ಯೆಗಳನ್ನು ಅಂದರೆ ಅಕಾಡೆಮಿಕ್, ಹಾಸ್ಟೆಲ್, ಪರೀಕ್ಷೆ ಶುಲ್ಕ, ಪಾವತಿಯಿಂದ ಹಿಡಿದು ಎಲ್ಲವೂ ಒಂದೇ ಜಾಗದಲ್ಲಿ ಆಗುವಂತೆ ಮತ್ತು ಈಗಾಗಲೇ ಶುಲ್ಕ ಪಾವತಿಗೆ ಇರುವ ಆನ್‌ಲೈನ್ ವ್ಯವಸ್ಥೆಯನ್ನು ಇನ್ನಷ್ಟು ಚುರುಕುಗೊಳಿಸಲು ಕ್ರಮ ಕೈಗೊಳ್ಳುವುದು.

2. ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಮಸ್ಯೆ ಆಲಿಸಲು ಪ್ರತ್ಯೇಕವಾದ ಒಂದು ಕೌಂಟರ್ ತೆರೆದು ಅಲ್ಲಿ ಪ್ರತಿ ದಿನವೂ ವಿದ್ಯಾರ್ಥಿಗಳ ಕುಂದು ಕೊರತೆ ಕೇಳಲು ಒಬ್ಬರನ್ನು ನೇಮಕ ಮಾಡಬೇಕು. ಅವರು ವಿದ್ಯಾರ್ಥಿಗಳ ಅಕಾಡೆಮಿಕ್ ಮತ್ತು ಇನ್ನಿತರೆ ಸಮಸ್ಯೆಗಳನ್ನು ಆಲಿಸುವ ಮನವಿಗಳನ್ನು ಪಡೆಯುವ ಮತ್ತು ಯಾವ ವಿಭಾಗಕ್ಕೆ ಸಂಬಂಧಿಸಿದ ಸಮಸ್ಯೆ ಇದೆ ಅದನ್ನು ಅಲ್ಲಿಯೇ ಮಾತನಾಡಿ ಪರಿಹರಿಸುವಂತೆ ಇರಬೇಕು.

3. ಕುಲಪತಿಗಳು, ಕುಲಸಚಿವರು (ಆಡಳಿತ) ಮತ್ತು ಕುಲಸಚಿವರು (ಪರೀಕ್ಷಾಂಗ) ಇವರು ಪ್ರತಿ ಮೂರು ತಿಂಗಳಿಗೊಮ್ಮೆ ನೋಂದಾಯಿತ ವಿದ್ಯಾರ್ಥಿ ಸಂಘಟನೆಗಳು ಮತ್ತು ಕಾಲೇಜು ವಿದ್ಯಾರ್ಥಿ ಸಂಘಟನೆಗಳ ಮುಖ್ಯಸ್ಥರೊಂದಿಗೆ ಸಿಂಡಿಕೇಟ್ ಸದಸ್ಯರ ಉಪಸ್ಥಿತಿಯಲ್ಲಿ ಸಭೆಗಳನ್ನು ನಡೆಸಿ, ವಿದ್ಯಾರ್ಥಿ ಕುಂದುಕೊರತೆಗಳ ಬಗ್ಗೆ ಸಭೆಗಳನ್ನು ನಡೆಸಬೇಕು.

4. ಕುಲಪತಿಗಳು, ಕುಲಸಚಿವರು (ಆಡಳಿತ) ಮತ್ತು ಕುಲಸಚಿವರು (ಪರೀಕ್ಷಾಂಗ) ಇವರು ಪ್ರತಿ 3–4 ತಿಂಗಳಿಗೊಮ್ಮೆ ವಿಶ್ವವಿದ್ಯಾಲಯದ ವ್ಯಾಪ್ತಿಯ ಪ್ರಾಂಶುಪಾಲರೊಂದಿಗೆ ವಿದ್ಯಾರ್ಥಿಗಳ ಕುಂದುಕೊರತೆ ಕುರಿತಂತೆ ಭೌತಿಕವಾಗಿ ಅಥವಾ ವಿಡಿಯೋ ಕಾನ್ಪರೆನ್ಸ್ ಮೂಲಕ ಸಭೆ ನಡೆಸಬೇಕು.

5. ಕುಲಪತಿಗಳು, ಕುಲಸಚಿವರು (ಆಡಳಿತ) ಮತ್ತು ಕುಲಸಚಿವರು (ಪರೀಕ್ಷಾಂಗ) ಇವರು ವಿದ್ಯಾರ್ಥಿ ಸಂಘಟನೆ ನಾಯಕರಿಗೆ, ವಿದ್ಯಾರ್ಥಿಗಳಿಗೆ ಸಂದರ್ಶನದ ಸಮಯವನ್ನು ಕನಿಷ್ಟ ವಾರದಲ್ಲಿ ಎರಡು ದಿನ ನಿಗದಿಪಡಿಸಿ ಅವಕಾಶ ಕೊಡಬೇಕು.

6. ವಿದ್ಯಾರ್ಥಿಗಳು ತಮ್ಮ ಸಮಸ್ಯೆ ಮತ್ತು ದೂರುಗಳನ್ನು ತಿಳಿಸಲು ವಾಟ್ಸಪ್ ಮೂಲಕ ಅವಕಾಶ ಮಾಡಿಕೊಡಬೇಕು.ಸದರಿ ವಾಟ್ಸಪ್ ನಂಬರ್ ಗಳನ್ನು ಎಲ್ಲಾ ಕಾಲೇಜು ನೋಟೀಸ್ ಬೋರ್ಡ್‌ನಲ್ಲಿಯೂ ಪ್ರಕಟಿಸಬೇಕು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ರವರು ಮಾತನಾಡುತ್ತಾ, ಕಳೆದ ಒಂದೂವರೆ ವರ್ಷದಿಂದ ಸಿಂಡಿಕೇಟ್ ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳು ಅನುಷ್ಠಾನಗೊಂಡು ಆದೇಶಹೊರಡಿಸುವುದು ವಿಳಂಬವಾಗುತ್ತಿದೆ. ಯಾವ ಸಮಸ್ಯೆ ಕೂಡಾ ಬಗೆ ಹರಿದಿರುವುದಿಲ್ಲವೆಂದರು.

ಸದಸ್ಯರಾದ ಡಾ. ಎಂ. ವೆಂಕಟೇಶ್. ಇವರು ಮಾತನಾಡುತ್ತಾ, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವ ಇಂಗ್ಲೀಷ್, ಕನ್ನಡ ಹಾಗೂ ವಾಣಿಜ್ಯ (ಕಾಮರ್ಸ್) ವಿಷಯಗಳ ಮೌಲ್ಯಮಾಪನ ಹಂಚಿಕೆ ಸಮರ್ಪಕವಾಗಿ ಮಾಡಿ ಆದಷ್ಟು ಬೇಗ ಮೌಲ್ಯಮಾಪನ ಮುಗಿಸಬೇಕು ಎಂದರು. ಹಾಗೂ ಈ ಬಾರಿ ಬಿಸಿಎ ಪದವಿಯ ವಿಷಯಗಳಲ್ಲಿನ ಪರೀಕ್ಷಾ ಮಂಡಳಿಯ ಅಧ್ಯಕ್ಷರುಗಳು ಪರೀಕ್ಷೆ ಮುಗಿದು 05 ದಿನಗಳೊಳಗಾಗಿ ಮೌಲ್ಯಮಾಪನ ಮುಗಿಸಿರುತ್ತಾರೆ ಎಂದರು.

ಸದಸ್ಯರಾದ ಶ್ರೀ ಲಕ್ಷ್ಮಿಕಾಂತ ಚಿಮನೂರು ಇವರು ಮಾತನಾಡುತ್ತಾ, ಇಂಗ್ಲೀಷ್ ಒಂದೇ ವಿಷಯ ಯಾಕೆ ವಿಳಂಬವಾಗಿದೆ ಎಂಬುದರ ಕುರಿತು ಪರಿಶೀಲಿಸಬೇಕು ಎಂದರು.

ಸದಸ್ಯರಾದ ಪ್ರೊ. ಸಾಕಮ್ಮ ಬಿ. ಹಾಗೂ ಶ್ರೀ ಶಿವಕುಮಾರ್ ಎಂ. ಇವರುಗಳು ಮಾತನಾಡುತ್ತಾ, ಎಲ್ಲಾ ವಿಷಯಗಳ ಮೌಲ್ಯಮಾಪನ ನಿಗಧಿತ ಅವಧಿಯೊಳಗೆ ಆಗುತ್ತೇ ಆದರೆ ಇಂಗ್ಲೀಷ್ ಮಾತ್ರ ಯಾಕೆ ವಿಳಂಬವಾಗುತ್ತಿದೆ ಎಂದರು.

ಸದಸ್ಯರಾದ ಡಾ. ಪ್ರಭಾಕರ್ ಎಸ್. ಮಂಟೂರೆರವರು ಮಾತನಾಡುತ್ತಾ, ಇಂಗ್ಲೀಷ್ ಮೌಲ್ಯಮಾಪನಕ್ಕೆ ತೆರಳುವವರು **'ವಿಶೇಷ ಸಾಂದರ್ಭಿಕ ರಜೆ'** ನೀಡುವಂತೆ ಕೇಳುತ್ತಾರೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ ಡಿಜಿಟಲ್ ವ್ಯವಸ್ಥೆ ಬಂದ ನಂತರ ವಿಳಂಬವೋ ಅಥವಾ ಹಿಂದಿನ ವ್ಯವಸ್ಥೆ ಉತ್ತಮವಾಗಿತ್ತೋ ಹೇಗೆ ಎಂದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ರವರು ಮಾತನಾಡುತ್ತಾ, ಅತಿಥಿ ಉಪನ್ಯಾಸಕರು ಮತ್ತು ಖಾಯಂ ಅಧ್ಯಾಪಕರ ಮಧ್ಯೆ ಸಮಸ್ಯೆ ಇದೆ, ಮತ್ತು ಸರಿಯಾದ ಸಮಯಕ್ಕೆ ಸಂಭಾವನೆ ಪಾವತಿಸುವುದಿಲ್ಲ ಎಂದರು.

ಕುಲಸಚಿವರು ಮಾತನಾಡುತ್ತಾ, ಕುಲಸಚಿವರು (ಮೌಲ್ಯಮಾಪನ) ರವರು ಮೌಲ್ಯಮಾಪನ ಪ್ರಾರಂಭವಾಗುವ ಮೊದಲು ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳ ಸಭೆ ಕರೆದು ಮೌಲ್ಯಮಾಪನ ಯಾವಾಗ ಪ್ರಾರಂಭ ಮಾಡಬೇಕು, ಯಾವ ಸಮಯದಲ್ಲಿ ಮುಕ್ತಾಯ ಮಾಡಬೇಕು, ಸಂಭಾವನೆ ಯಾವ ಸಮಯದಲ್ಲಿ ಪಾವತಿಸಲಾಗುವುದು ಎಲ್ಲಾ ವಿಷಯಗಳನ್ನು ಚರ್ಚಿಸಿ ಅವರುಗಳಿಗೆ ತಿಳಿಸಬೇಕು. ಹಾಗೂ ಉತ್ತರ ಪತ್ರಿಕೆಯನ್ನು ಸಮಾನವಾಗಿ ಹಂಚಿಕೆಯಾಗಬೇಕು ಹಾಗೂ ವಿಶ್ವವಿದ್ಯಾಲಯದ ವೇಳಾಪಟ್ಟಿಯ ಪ್ರಕಾರ ಎಲ್ಲಾ ಕಾರ್ಯಗಳು ಮುಕ್ತಾಯಗೊಳಿಸಬೇಕು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸದಸ್ಯರಾದ ಶ್ರೀ ಶಿವಕುಮಾರ್ ಎಂ. ರವರು ಮಾತನಾಡುತ್ತಾ, ಮೌಲ್ಯಮಾಪನಕ್ಕೆ ಮಾರ್ಜಿನ್ ಕೊಡಬೇಕು ಮತ್ತು ಮೌಲ್ಯಮಾಪನ ಮಾಡಿದ ದಿನವೇ ಸಂಭಾವನೆ ನೀಡಲು ಸಾಧ್ಯವಿಲ್ಲವೇ ಎಂದರು.

ಕುಲಸಚಿವರು ಮಾತನಾಡಿ ಈ ಬಗ್ಗೆ ಹಣಕಾಸು ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ರವರು ಮಾತನಾಡುತ್ತಾ, ಸಹ್ಯಾದ್ರಿ ಕಾಲೇಜಿನಲ್ಲಿ ಇ.ಸಿ.ಎ. ಕಾರ್ಯಕ್ರಮ ಮುಗಿದರೂ ಅವರಿಗೆ ಹಣ ಮಂಜೂರು ಮಾಡಿರುವುದಿಲ್ಲ ಎಂದರು. ಇದಕ್ಕೆ ಕುಲಸಚಿವರು ಮಾತನಾಡಿ ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಭೆ ಮಾಡಿ ತೀರ್ಮಾನಿಸಲಾಗುವುದು ಎಂದರು.

ಸದಸ್ಯರಾದ ಶ್ರೀ ಶ್ರೀಪಾಲ್ ರವರು ಮಾತನಾಡಿ ಅತಿಥಿ ಉಪನ್ಯಾಸಕರ ನೇಮಕಾತಿ ವಿಳಂಬವಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದು, ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆ ಆಗದ ರೀತಿಯಲ್ಲಿ ನಿಗದಿತ ಸಮಯದಲ್ಲಿ ನೇಮಕಾತಿ ಮಾಡಬೇಕು ಎಂದರು. ಹಾಗೂ ಅಂಕಪಟ್ಟಿಯನ್ನು ನೀಡದೇ ಇರುವುದನ್ನು ಪ್ರಸ್ತಾಪಿಸಿ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದರು.

ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡಿ, NAD ವ್ಯವಸ್ಥೆ ಇರುವುದರಿಂದ ಅಂಕಪಟ್ಟಿಯನ್ನು ನೀಡುವುದಿಲ್ಲವೆಂದರು.

ಕುಲಸಚಿವರು ಮಾತನಾಡಿ, ಸರ್ಕಾರದ ಆದೇಶದ ಮೇರೆಗೆ ಅಂಕಪಟ್ಟಿಯನ್ನು ನೀಡಲು ಅವಕಾಶ ಇರುವುದಿಲ್ಲ. ನೈಜತೆ ಪರಿಶೀಲನೆ ಮಾಡಿಕೊಡಲಾಗುವುದು ಅದರಲ್ಲಿ ಯಾವುದೇ ವಿಳಂಬ ಮಾಡುವುದಿಲ್ಲವೆಂದರು.

ಸದಸ್ಯರಾದ ಶಿವಕುಮಾರ್ ರವರು ಮಾತನಾಡಿ ಅಂಕಪಟ್ಟಿಯ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆಯಲಾಗುತ್ತಿದೆ ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು(ಮೌಲ್ಯಮಾಪನ) ರವರು ಈ ವರ್ಷ ಅಂಕಪಟ್ಟಿಗೆ ಶುಲ್ಕ ಪಡೆದಿರುವುದಿಲ್ಲ ಎಂದರು.

ಸದಸ್ಯರಾದ ಡಾ. ಎಂ. ವೆಂಕಟೇಶ್ ಇವರು ಮಾತನಾಡಿ ಬಿ.ಸಿ.ಎ ಉತ್ತೀರ್ಣರಾದ ವಿದ್ಯಾರ್ಥಿಗಳು ಕಂಪನಿಗಳಿಗೆ ನೇಮಕವಾದಾಗ ಅಂಕಪಟ್ಟಿಯು ಅವಶ್ಯವಾಗಿರುತ್ತದೆ. ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ತಂತ್ರಾಂಶದಲ್ಲಿ ಒಮ್ಮೆ **'ಪಾಸು'** ಎಂದು ನಂತರ ಒಂದು ವಿಷಯ **'ಫೇಲ್'** ಎಂದು ತೋರಿಸಲಾಗುತ್ತಿದೆ ಇದರಿಂದ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ತೊಂದರೆಯಾಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ ಅಂಕಪಟ್ಟಿ ನೀಡಲಾಗುತ್ತಿತ್ತು ಆದರೆ ಸರ್ಕಾರದಿಂದ ಅಂಕಪಟ್ಟಿ ನೀಡಬೇಡಿ ಎಂದು ಆದೇಶ ಬಂದ ಹಿನ್ನೆಲೆಯಲ್ಲಿ ನೀಡಲಾಗುತ್ತಿಲ್ಲವೆಂದರು. ಹಾಗೂ **'ಡಿಜಿಲಾಕರ್'** ಬಗ್ಗೆ ಬಹಳಷ್ಟು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಮಾಹಿತಿ ಇಲ್ಲ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಸಚಿವರು ಮಾತನಾಡಿ ಡಿಜಿಲಾಕರ್ ಮತ್ತು ಇನ್ನಿತರೆ ತಂತ್ರಾಂಶಗಳ ಕುರಿತು ಕಾಲೇಜು ಮಟ್ಟದಲ್ಲಿ ಒಂದು ಕಾರ್ಯಾಗಾರ ಮಾಡಿ ಇದರಲ್ಲಿ ಅಂಕಪಟ್ಟಿ ಪಡೆಯುವುದು ಹೇಗೆ ಎಂಬ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯತೆ ಬಗ್ಗೆ ಮಾತನಾಡುತ್ತಾ, ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ಸಿಬ್ಬಂದಿಗಳನ್ನು ಕರೆಸಿ ಒಂದು ಸಭೆ ಮಾಡಿ ಅವರಿಗೆ ಇದರ ಬಗೆಗಿನ ಸಂಪೂರ್ಣ ಮಾಹಿತಿ ನೀಡಬೇಕು. ಮತ್ತು ಇದರ ಸಂಪೂರ್ಣ ವಿಡಿಯೋ ರೆಕಾರ್ಡ್ ಮಾಡಿ ಯೂಟ್ಯೂಬ್ ಮತ್ತು ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ಲಿಂಕ್ ನೀಡಿದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದರು.

ಸದಸ್ಯರಾದ ಡಾ. ಚಿದಾನಂದ ಎಸ್.ಕೆ. ಇವರು ಮಾತನಾಡಿ ಎಲ್ಲಾ ಕಾಲೇಜುಗಳ ಯು.ಯು.ಸಿ.ಎಂ.ಎಸ್ ನೋಡಲ್ ಅಧಿಕಾರಿಗಳನ್ನೂ ಕರೆಸಿ ಅವರಿಗೂ ಈ ಬಗ್ಗೆ ಮಾಹಿತಿ ನೀಡಬೇಕು ಎಂದರು.

ಸದಸ್ಯರಾದ ಶ್ರೀ ಶ್ರೀಪಾಲ್ ರವರು ಮಾತನಾಡಿ ಫಲಿತಾಂಶದಲ್ಲಿ ಒಂದು ಬಾರಿ **'ಪಾಸ್'** ಇನ್ನೊಂದು ಬಾರಿ **'ಫೇಲ್'** ಎಂದು ಇದಕ್ಕೆ ಯಾರು ಕಾರಣ ಪರೀಕ್ಷಾ ವಿಭಾಗದಲ್ಲಿ ಅನೇಕ ವರ್ಷಗಳಿಂದ ಒಂದೇ ವಿಭಾಗದಲ್ಲಿ ಕಾರ್ಯನಿರ್ವಹಿಸುವವರನ್ನು ವರ್ಗಾವಣೆ ಮಾಡಬೇಕು ಎಂದರು.

ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡಿ ಹಿಂದೆ ಏನು ದೋಷ ಆಗಿದೆ ಎಂಬುದು ಗೊತ್ತಿದೆ ಮುಂದಿನ ದಿನಗಳಲ್ಲಿ ಹಾಗೆ ಆಗದ ರೀತಿ ಕ್ರಮಕೈಗೊಳ್ಳಲಾಗುವುದು ಮತ್ತು ದೋಷಕ್ಕೆ ಕಾರಣರಾದವರ ಬಗ್ಗೆಯೂ ಉನ್ನತ ಮಟ್ಟದ ತನಿಖೆ ಮಾಡಿಸಲಾಗುವುದು ಎಂದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾ ಎಂ. ರವರು ಮಾತನಾಡುತ್ತಾ, ಪಿಹೆಚ್.ಡಿ Entrance Exam ನಲ್ಲೂ ತುಂಬಾ ದೋಷ ಇದೆ ಅದನ್ನೂ ಸಹ ಸರಿ ಮಾಡಬೇಕು ಎಂದರು.

ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡಿ ಈ ವರ್ಷದಿಂದ Centralized Ph.D Entrance Exam ಮಾಡಲಾಗಿರುವ ವಿವರವನ್ನು ಸಭೆಗೆ ತಿಳಿಸಿದರು.

ಕುಲಸಚಿವರು ಮಾತನಾಡಿ NET, SLET ಪಾಸಾದವರಿಗೆ ಮಾತ್ರ Ph.D. ಪ್ರವೇಶ ನೀಡಬೇಕು ಎಂದರು.

2. <u>ಏಕಾ ಏಕಿ ಏರಿಸಿರುವ ಸಾವಿರಾರು ರೂಪಾಯಿ ಪರೀಕ್ಷಾ ಶುಲ್ಕ ಹಾಗೂ ಪ್ರವೇಶ ಶುಲ್ಕವನ್ನು ಇಳಿಸಬೇಕು.</u>

ವಿದ್ಯಾರ್ಥಿ ಸಂಘಟನೆಯ ಈ ಬೇಡಿಕೆಯ ಕುರಿತು ಕುಲಸಚಿವರು ಮಾತನಾಡುತ್ತಾ, ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಶುಲ್ಕವನ್ನು ಜಾರಿಗೊಳಿಸಲಾಗಿದೆ. ಮತ್ತು ಸರ್ಕಾರವು ನಿಗದಿಪಡಿಸಿರುವ ಮತ್ತು ಅನ್ಯ ವಿಶ್ವವಿದ್ಯಾಲಯವು ಅನುಸರಿಸುತ್ತಿರುವ ಶುಲ್ಕಗಳಿಗಿಂತ ನಮ್ಮ ವಿಶ್ವವಿದ್ಯಾಲಯದ ಶುಲ್ಕ ಕಡಿಮೆ ಇರುವುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

3. **ಡಿಜಿಟಲ್ ಮೌಲ್ಯಮಾಪನದಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು ಕೂಡಲೇ ಡಿಜಿಟಲ್ ಮೌಲ್ಯಮಾಪನವನ್ನು ಕೈಬಿಡಬೇಕು.**

ವಿದ್ಯಾರ್ಥಿ ಸಂಘಟನೆಯ ಈ ಬೇಡಿಕೆ ಕುರಿತು ಸದಸ್ಯರಾದ ಶ್ರೀಪಾಲ್ ರವರು ಮಾತನಾಡಿ ಡಿಜಿಟಲ್ ಮೌಲ್ಯಮಾಪನ ತಂತ್ರಾಂಶದ ಟೆಂಡರ್‌ನಲ್ಲೇ ಸಮಸ್ಯೆ ಇದೆ ಇದರ ಬಗ್ಗೆ ತನಿಖೆ ಮಾಡಿಸಬೇಕು ಎಂದರು.

ಸದಸ್ಯರಾದ ಡಾ.ವೆಂಕಟೇಶ್ ಇವರು ಮಾತನಾಡಿ ಡಿಜಿಟಲ್ ಮೌಲ್ಯಮಾಪನಕ್ಕೆ ಕೇಂದ್ರೀಕೃತ ಮೌಲ್ಯಮಾಪನ ವ್ಯವಸ್ಥೆ ಹಾಗೂ ಹೊಸದಾಗಿ ಮಾಲ್ಯಮಾಪನ ಮಾಡುವ ಅಧ್ಯಾಪಕರಿಗೆ ಮಾಹಿತಿಯ ಕೊರತೆ ಇರುತ್ತದೆ ಅಂತಹವರಿಗೆ ಮೌಲ್ಯಮಾಪನಕ್ಕೆ ಮೊದಲು ಕರೆಸಿ, ಅದರ ಬಗ್ಗೆ ಮಾಹಿತಿಯನ್ನು ಕುಲಸಚಿವ (ಮೌಲ್ಯಮಾಪನ) ಇವರು ನೀಡಬೇಕು ಎಂದರು.

4. **ಭ್ರಷ್ಟಾಚಾರದ ಆರೋಪ ಹಾಗೂ ವಿಶ್ವವಿದ್ಯಾಲಯದಲ್ಲಿ ಕಳಂಕ ಹೊತ್ತಿರುವ ಎಲ್ಲಾ ಅಧಿಕಾರಿಗಳನ್ನು ತಕ್ಷಣ ವಜಾ ಮಾಡಬೇಕು.**

ಈ ಬೇಡಿಕೆಯ ಕುರಿತು ಕುಲಸಚಿವರು ಮಾತನಾಡಿ ಭ್ರಷ್ಟಾಚಾರದ ಆರೋಪ ಇರುವ ಅಧಿಕಾರಿಗಳ ಬಗ್ಗೆ ಮಾಹಿತಿ ಇದ್ದರೆ ನೀಡಿದಲ್ಲಿ ಅದರಂತೆ ಪರಿಶೀಲಿಸಿ ನಿಯಮದಡಿಯಲ್ಲಿ ಕ್ರಮವಹಿಸಲಾಗುವುದು ಎಂದರು.

ಶ್ರೀಪಾಲ್ ಇವರು ಮಾತನಾಡಿ ಬಹಳಷ್ಟು ಆರೋಪಗಳು ಇದೆ ಎಂದರು. ಇದಕ್ಕೆ ಕುಲಸಚಿವರು ಉತ್ತರಿಸುತ್ತಾ ಎಲ್ಲವನ್ನೂ ತನಿಖೆ ಮಾಡಿಸೋಣವೆಂದರು.

ಸದಸ್ಯರಾದ ಪ್ರೊ.ಸಾಕಮ್ಮ ಬಿ. ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಶ್ರೀ ಚಂದ್ರಕಾಂತ ಎಂ. ಉಪಕುಲಸಚಿವ ಎಂಬುವವರ ಮೇಲೆ Enquiry ಮಾಡಬೇಕು ಎಂದು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೈಗೊಂಡರೂ ಸಹ ಅವರನ್ನು ಬಡ್ತಿ ನೀಡಿ ಎರಡೆರಡು ವಿಭಾಗದ ಜವಾಬ್ದಾರಿ ನೀಡಲಾಗಿದೆ ಎಂದರು. ಒಂದೇ ದಿನದಲ್ಲಿ H.R.M. (ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ) ವಿಭಾಗಕ್ಕೆ ವರ್ಗಾಯಿಸಲಾಗಿದೆ ಎಂದರು. ಇದಕ್ಕೆ ಶ್ರೀಪಾಲ್ ಮತ್ತು ಮುಸಾವೀರ್ ಬಾಷಾರವರು ಧ್ವನಿಗೂಡಿಸಿದರು. ಶ್ರೀ ಶ್ರೀಪಾಲ್‌ರವರು ಮಾತನಾಡುತ್ತಾ ಶ್ರೀ ಚಂದ್ರಕಾಂತ ಎಂ. ಇವರ ಬಗ್ಗೆ ಈ ಹಿಂದೆ ಸಿಂಡಿಕೇಟ್ ಉಪಸಮಿತಿ ವರದಿ ನೀಡಿದ್ದು, ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳು ನನ್ನ ಬಳಿ ಇದ್ದು, ಅವಶ್ಯಕತೆ ಇದ್ದಲ್ಲಿ ಅವುಗಳನ್ನು ಒದಗಿಸಲಾಗುವುದು ಎಂದರು. ಸದಸ್ಯರಾದ ಶ್ರೀ ಶಿವಕುಮಾರ್‌ರವರು ಮಾತನಾಡುತ್ತಾ, ಶ್ರೀ ಎನ್.ಜೆ. ಪಾಲಾಕ್ಷನಾಯ್ಕ, ಉಪಕುಲಸಚಿವ ಇವರ ಬಗ್ಗೆಯೂ ಸಹ ಸಭೆಯ ಗಮನಕ್ಕೆ ತಂದರು. ಇದಕ್ಕೆ ಕುಲಸಚಿವರು(ಮೌಲ್ಯಮಾಪನ) ರವರು ಮಾತನಾಡಿ ಶ್ರೀ.ಎಂ.ಚಂದ್ರಕಾಂತ್ ಇವರ ವಿರುದ್ಧ ತನಿಖೆ ಮಾಡಲು ನಿರ್ದಿಷ್ಟ ಆರೋಪಗಳಿದ್ದಲ್ಲಿ ನೀಡುವಂತೆ ಚಿಕ್ಕಮಗಳೂರಿನಲ್ಲಿ ನಡೆದ ಸಭೆಯಲ್ಲೇ ತಿಳಿಸಲಾಗಿದೆ. ಆದರೆ ಯಾವುದೇ ಸದಸ್ಯರು ಇವರ ಮೇಲಿನ ಆರೋಪಗಳ ಕುರಿತು ಲಿಖಿತ ದೂರುಗಳನ್ನು ನೀಡಿರುವುದಿಲ್ಲ ಮತ್ತು ಅವರನ್ನು ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
...-577 451

ಮಾನ್ಯ ಕುಲಪತಿಯವರು ಮಾತನಾಡಿ ಶ್ರೀ. ಚಂದ್ರಕಾಂತ ಎಂ. ಇವರ ಬಗ್ಗೆ ಯಾವ ಆರೋಪಗಳ ಬಗ್ಗೆ ತನಿಖೆ ಮಾಡಬೇಕು ಎಂದು ಸ್ಪಷ್ಟಪಡಿಸುವಂತೆ ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡುತ್ತಾ ಶ್ರೀ ಚಂದ್ರಕಾಂತ್ ಎಂ. ಇವರ ಮೇಲಿನ ಯಾವ ಆರೋಪಗಳನ್ನು ಸಹ ನಿರ್ದಿಷ್ಟವಾಗಿ ಪ್ರತಿಪಾದಿಸಲಾಗಿರುವುದಿಲ್ಲ ಹಾಗೂ ಆರೋಪಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ. ಹೀಗಿರುವಾಗ ಅವರ ಮೇಲಿನ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಲು ಸಾಧ್ಯವಿರುವುದಿಲ್ಲ. ಒಬ್ಬ ಸಿಬ್ಬಂದಿಯ ಮೇಲೆ ಆಧಾರ ರಹಿತ ಆರೋಪಗಳನ್ನು ಹೊರಿಸಿ ತಪ್ಪಿತಸ್ಥರು ಎಂಬ ಭಾವನೆ ಮೂಡಿಸಿ ತೊಂದರೆ ನೀಡುವ ಉದ್ದೇಶದಂತೆ ಕಂಡುಬಂದಿರುವುದರಿಂದ ಇಂತಹ ಅಪಾದನೆಯನ್ನು ಕೈಬಿಡಬೇಕೆಂದು ಸಮರ್ಥಿಸಿದರು. ನಂತರ ಕುಲಸಚಿವರು ಮಾತನಾಡಿ ಈ ವಿಷಯದ ಕುರಿತು ಆಡಳಿತಾತ್ಮಕವಾಗಿ ಕುಲಪತಿಗಳೊಂದಿಗೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ಶ್ರೀ ಚಂದ್ರಕಾಂತ್ ಎಂ. ಇವರ ಮೇಲಿನ ನಿರಾದಾರ ಆರೋಪಗಳ ಮೇಲೆ ಸಭೆಯಲ್ಲಿ ಯಾವುದೇ ನಿರ್ಣಯ ತೆಗೆದುಕೊಳ್ಳುವುದು ಸಾಧ್ಯವಾಗಿರುವುದಿಲ್ಲ.

ಕುಲಸಚಿವರು ಮಾತನಾಡಿ ವಿದ್ಯಾರ್ಥಿಸಂಘಟನೆಯ ಉಳಿದ ಬೇಡಿಕೆಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಹಾಗೂ A.B.V.P. ವಿದ್ಯಾರ್ಥಿ ಸಂಘಟನೆಯು ನೀಡಿರುವ ಬೇಡಿಕೆಗಳೂ ಸಹ ಮೇಲ್ಕಂಡ ವಿಷಯಗಳ ರೀತಿಯಲ್ಲೇ ಇದ್ದು ಅದರ ಬಗ್ಗೆ ಪುನ: ಚರ್ಚಿಸುವ ಅಗತ್ಯವಿಲ್ಲವೆಂದರು. ನಂತರ ಅಂತಿಮವಾಗಿ ವಿದ್ಯಾರ್ಥಿ ಸಂಘಟನೆಗಳು ನೀಡಿರುವ ಮನವಿಗಳಿಗೆ ಸೂಕ್ತ ರೀತಿಯಲ್ಲಿ ಉತ್ತರಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**ನಿರ್ಣಯ:** 1) ವಿದ್ಯಾರ್ಥಿ ಸಂಘಟನೆಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಮನವಿಗಳ ಕುರಿತು ಮೇಲ್ಕಂಡಂತೆ ಸುಧೀರ್ಘವಾಗಿ ಚರ್ಚಿಸಿ ಅಂತಿಮವಾಗಿ ವಿದ್ಯಾರ್ಥಿ ಸಂಘಟನೆಗಳು ನೀಡಿರುವ ಮನವಿಗಳಿಗೆ ಸೂಕ್ತ ರೀತಿಯಲ್ಲಿ ಉತ್ತರಿಸಲು ನಿರ್ಣಯಿಸಲಾಯಿತು.

2) 2023–24 ಹಾಗೂ 2024–25 ಶೈಕ್ಷಣಿಕ ವರ್ಷಗಳಲ್ಲಿ ನಡೆದ ಪರೀಕ್ಷೆಗಳ ಫಲಿತಾಂಶಗಳಲ್ಲಿ ಲೋಪದೋಷಗಳಾಗಿರುವ ಬಗ್ಗೆ ಸರ್ಕಾರದ ಉನ್ನತ ಮಟ್ಟದ ತನಿಖೆ ನಡೆಸಲು ನಿರ್ಣಯಿಸಲಾಯಿತು.

3) ಭ್ರಷ್ಟಾಚಾರದ ಆರೋಪದ ಕುರಿತು ಸರ್ಕಾರದ ವಿಶ್ವವಿದ್ಯಾಲಯಗಳ ಕಾಯ್ದೆಯನುಸಾರ ಸರ್ಕಾರದ ಮಟ್ಟದಲ್ಲಿ ಉನ್ನತ ಮಟ್ಟದ ತಂಡವನ್ನು ರಚಿಸಿ ತನಿಖೆ ನಡೆಸಿ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ನಿರ್ಣಯಿಸಲಾಯಿತು.

ಉಳಿದಂತೆ ಮೇಲ್ಕಂಡ ಚರ್ಚೆಯಲ್ಲಿ ಆಗಿರುವ ಅಂಶಗಳ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಹ ನಿರ್ಣಯಿಸಲಾಯಿತು.

**2026–ಸಿಂ–4.02:** **ದಿನಾಂಕ:29–04–2026 ರಂದು ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿ ನಡೆದಿರುವ ಅಹಿತಕರ ಘಟನೆಗಳ ಬಗ್ಗೆ ಸರ್ಕಾರಕ್ಕೆ ವರದಿಯನ್ನು ನೀಡುವ ಕುರಿತು.**

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಚರ್ಚೆ: ದಿನಾಂಕ:29-04-2026 ರಂದು ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿ ನಡೆದ ಅಹಿತಕರ ಘಟನೆಗಳ ಕುರಿತು ಕುಲಸಚಿವರು ವಿವರಿಸಿ ಈ ರೀತಿಯ ಘಟನೆ ಆಗಬಾರದಿತ್ತು ಆಗಿದೆ ಪ್ರಸ್ತುತ ಪೋಲೀಸ್ ತನಿಖೆ ನಡೆಯುತ್ತಿರುವುದರಿಂದ ಇದರ ಬಗ್ಗೆ ಇಂದಿನ ಸಭೆಯಲ್ಲಿ ಹೆಚ್ಚು ಚರ್ಚೆ ಮಾಡಿ ನಿರ್ಣಯ ಕೈಗೊಳ್ಳಲು ಅವಕಾಶವಿರುವುದಿಲ್ಲವೆಂದರು.

ಮಾನ್ಯ ಕುಲಪತಿಯವರು ಮಾತನಾಡಿ ಕುಲಪತಿಗಳ ಕಛೇರಿಯಲ್ಲಿ ಇನ್ನಷ್ಟು ಸುರಕ್ಷತಾ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ಕುಲಸಚಿವರು(ಮೌಲ್ಯಮಾಪನ) ಇವರು ಮಾತನಾಡಿ ಆ ದಿನ ವಿದ್ಯಾರ್ಥಿ ಸಂಘಟನೆಯು ನಡೆದು ಕೊಂಡ ರೀತಿಯು ಸರಿಯಲ್ಲವೆಂದರು.

ಎಲ್ಲಾ ಸದಸ್ಯರುಗಳು ಈ ಘಟನೆಯ ಕುರಿತು ಖಂಡನೆಯನ್ನು ವ್ಯಕ್ತಪಡಿಸಿ ಮುಂದೆ ಈ ರೀತಿ ಆಗದಂತೆ ಅಗತ್ಯ ಕ್ರಮವಹಿಸಬೇಕು ಎಂದರು.

ನಿರ್ಣಯ: ದಿನಾಂಕ:29-04-2026 ರಂದು ನಡೆದ ಅಹಿತಕರ ಘಟನೆಯನ್ನು ಸಿಂಡಿಕೇಟ್ ಖಂಡಿಸಿ ಪೋಲೀಸ್ ತನಿಖೆಯಲ್ಲಿರುವುದರಿಂದ ಇದರ ಬಗ್ಗೆ ಸರ್ಕಾರ ಮತ್ತು ಕುಲಾಧಿಪತಿಗಳಿಗೆ ಒಂದು ವರದಿಯನ್ನು ನೀಡಲು ನಿರ್ಣಯಿಸಲಾಯಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2026-ಸಿಂ-4.03: ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರು ಸುಳ್ಳು ಪಿಹೆಚ್.ಡಿ. ಮತ್ತು ಮಾನ್ಯತೆ ಪಡೆಯದ ಎಂ.ಟೆಕ್. ಪದವಿ ಪ್ರಮಾಣ ಪತ್ರ ನೀಡಿ ನೇಮಕಾತಿ ಹೊಂದಿರುವುದು ಸಾಬೀತಾಗಿರುವುದರಿಂದ ಇವರನ್ನು ಸೇವೆಯಿಂದ ವಜಾಗೊಳಿಸಲು ಘನತೆವೆತ್ತ ರಾಜ್ಯಪಾಲರ ಅನುಮೋದನೆಯನ್ವಯ ಸರ್ಕಾರ ನೀಡಿರುವ ನಿರ್ದೇಶನವನ್ನು ಅನುಷ್ಠಾನಗೊಳಿಸುವ ಕುರಿತು.**

ಚರ್ಚೆ: ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿದ್ಯಾಶಂಕರ್.ಎಂ.ಹೆಚ್. ಇವರು ಸುಳ್ಳು ಪಿಹೆಚ್.ಡಿ ಪದವಿ ಪಡೆದು ನೇಮಕಗೊಂಡಿರುವುದಾಗಿ ಬಂದ ದೂರಿನ ಕುರಿತು ಸರ್ಕಾರವು ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಆಗಿದ್ದ ಶ್ರೀ ಸ್ನೇಹಲ್ ಸುಧಾಕರ್ ಲೋಖಂಡೆ, ಐ.ಎ.ಎಸ್. ಇವರ ನೇತೃತ್ವದಲ್ಲಿ ಏಕ ಸದಸ್ಯ ಸಮಿತಿ ರಚಿಸಿ ಇಲಾಖಾ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ನೀಡುವಂತೆ ದಿನಾಂಕ:10-10-2023ರ ಆದೇಶದಲ್ಲಿ ತಿಳಿಸಿರುತ್ತದೆ.

ಅದರಂತೆ ಸದರಿಯವರು ದಿನಾಂಕ: 24-10-2024 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರು ಹೊಂದಿದ್ದ ಎಂ.ಟೆಕ್ ಪದವಿಯನ್ನು A.I.C.T.E. ಮಾನ್ಯತೆ ಹೊಂದಿರುವುದಿಲ್ಲವೆಂದು ಮತ್ತು ನಕಲಿ ಪಿಹೆಚ್.ಡಿ ಪದವಿ ಪ್ರಮಾಣ ಪತ್ರ ನೀಡಿ ನೇಮಕಾತಿ ಹೊಂದಿರುವುದು ಸಾಬೀತಾಗಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ.

ಸರ್ಕಾರವು ಸದರಿ ವರದಿಯ ಮೇರೆಗೆ, ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರನ್ನು ಸೇವೆಯಿಂದ ವಜಾಗೊಳಿಸುವ ಸಂಬಂಧ ಘನತೆವೆತ್ತ ರಾಜ್ಯಪಾಲರ ಅನುಮೋದನೆ ಕೋರಿದ್ದು, ಈ ಪ್ರಸ್ತಾವನೆಗೆ ಘನತೆವೆತ್ತ ರಾಜ್ಯಪಾಲರು ಅನುಮೋದನೆ ನೀಡಿರುತ್ತಾರೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಕರ್ನಾಟಕ ಸರ್ಕಾರವು ಪತ್ರ ಸಂಖ್ಯೆ:ಇಡಿ 58 ಯುಎಸ್‌ವಿ 2020 ದಿನಾಂಕ:28-04-2026ರಲ್ಲಿ ನೇಮಕಾತಿ ಹಾಗೂ ಶಿಸ್ತು ಪ್ರಾಧಿಕಾರ ವಿಶ್ವವಿದ್ಯಾಲಯವಾಗಿರುವುದರಿಂದ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರನ್ನು ಸೇವೆಯಿಂದ ವಜಾಗೊಳಿಸಲು ಕೂಡಲೇ ಕ್ರಮವಹಿಸುವಂತೆ ಆದೇಶಿಸಲಾಗಿರುತ್ತದೆ.

ಮೇಲ್ಕಂಡಂತೆ ಸರ್ಕಾರದಿಂದ ಬಂದ ನಿರ್ದೇಶನವನ್ನು ಸಭೆಯ ಗಮನಕ್ಕೆ ತಂದು ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ ಎಂದರು. ಮುಂದುವರೆದು ಮಾತನಾಡಿದ ಕುಲಸಚಿವರು ಯಾವುದೇ ಸರ್ಕಾರಿ ಸೇವೆಯಲ್ಲಿರುವವರನ್ನು ವಜಾ ಮಾಡುವಾಗ Natural Justice ಅಡಿಯಲ್ಲಿ ಅವರಿಗೆ ಒಂದು **'ನೋಟೀಸ್'** ನೀಡಿ ನಂತರ ಸರ್ಕಾರ ಮತ್ತು ಘನತೆವೆತ್ತ ಕುಲಾಧಿಪತಿಗಳ ಆದೇಶಗಳನ್ನು ಅನುಷ್ಠಾನಗೊಳಿಸಬೇಕಾಗಿದೆ ಎಂದರು.

ಚರ್ಚೆಯಲ್ಲಿ ಭಾಗವಹಿಸಿದ ಬಹುತೇಕ ಸದಸ್ಯರುಗಳು ಕುಲಾಧಿಪತಿಗಳಿಂದಲೇ ನಿರ್ದೇಶನ ಬಂದಿರುವುದರಿಂದ ಅವರಿಗೆ **'ನೋಟೀಸ್'** ನೀಡುವ ಅಗತ್ಯವಿದೆಯೇ ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು Principle of Natural Justice ಅಡಿಯಲ್ಲಿ ಅವರಿಗೆ ಅವಕಾಶ ನೀಡದೇ ಇದ್ದಲ್ಲಿ ಅವರು ನ್ಯಾಯಾಲಯದ ಮೊರೆ ಹೋದರೆ ವಿಶ್ವವಿದ್ಯಾಲಯವನ್ನು ಪ್ರಶ್ನಿಸಬಹುದಾಗಿದೆ ಎಂದರು. ಸಭೆಯಲ್ಲಿ ಈ ಬಗ್ಗೆ ಸುದೀರ್ಘ ಚರ್ಚೆಯ ನಂತರ ಸರ್ಕಾರ ಮತ್ತು ಘನತೆವೆತ್ತ ಕುಲಾಧಿಪತಿಯವರ ಆದೇಶಗಳನ್ನು ಅನುಷ್ಠಾನಗೊಳಿಸಬೇಕಾಗಿದ್ದು, ಪೂರ್ವಭಾವಿಯಾಗಿ ನ್ಯಾಯಾಲಯದಲ್ಲಿ **'ಕೇವಿಯೆಟ್'** ಸಲ್ಲಿಸಿ, ಮುಂದಿನ ಕ್ರಮವಹಿಸಲು ನಿರ್ಣಯಿಸಲಾಯಿತು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರು ಸುಳ್ಳು ಪಿಹೆಚ್.ಡಿ. ಮತ್ತು ಮಾನ್ಯತೆ ಪಡೆಯದ ಎಂ.ಟೆಕ್. ಪದವಿ ಪ್ರಮಾಣ ಪತ್ರ ನೀಡಿ ನೇಮಕಾತಿ ಹೊಂದಿರುವುದು ಸಾಬೀತಾಗಿರುವುದರಿಂದ ಇವರನ್ನು ಸೇವೆಯಿಂದ ವಜಾಗೊಳಿಸಲು ಘನತೆವೆತ್ತ ರಾಜ್ಯಪಾಲರ ಅನುಮೋದನೆಯನ್ವಯ ಸರ್ಕಾರ ನೀಡಿರುವ ನಿರ್ದೇಶನವನ್ನು ಸಭೆಯು ಅನುಮೋದಿಸಿ ಇವರಿಗೆ ನ್ಯಾಯಾಲಯದಲ್ಲಿ **'ಕೇವಿಯಟ್'** ಸಲ್ಲಿಸಿ ಇವರನ್ನು ಸೇವೆಯಿಂದ ವಜಾ ಮಾಡುವ ಬಗ್ಗೆ ನೋಟೀಸ್ ನೀಡಿ ಅನುಷ್ಠಾನಗೊಳಿಸಲು ಸಭೆಯು ನಿರ್ಣಯಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸಹಿ/-
ಕುಲಪತಿಗಳು